# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/173/2015-16

ದಿನಾಂಕ :15/09 / 2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಹರಿಜನ ಶಿವಣ್ಣ ತಂದೆ ಲೇಟ್ ಹರಿಜನ ವಲ್ಲೆಪ್ಪ<br>2.ಶ್ರೀಶರಣ ಬಸಪ್ಪ ತಂದೆ ಲೇಟ್ ಹರಿಜನ ವಲ್ಲೆಪ್ಪ<br>3.ಶ್ರೀ ಬಸಪ್ಪ ತಂದೆ ಲೇಟ್ ಹರಿಜನ ವಲ್ಲೆಪ್ಪ ವತ್ತುಮುರುಣ್ಣಿ , ಗ್ರಾಮ ಸಿರುಗುಪ್ಪ ತಾಲ್ಲೂಕು<br>(ಶ್ರೀಜೋಯಿಸ್ ಪ್ರಹ್ಲಾದ್,ಶ್ರೀಎಸ್.ಮುರಳಿ ಹಾಗೂ ಜಿ.ಡಿ.ವಿದ್ಯಾಶ್ರೀ , ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಸಿರುಗುಪ್ಪ<br>2.ಕಂದಾಯ ನಿರೀಕ್ಷಕರು,ಹಚೊಳ್ಳಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ವತ್ತುಮುರುಣ್ಣಿ | 43ಬಿ/1 | 3.77 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಸಿರುಗುಪ್ಪ ಇವರ ಹಿಂಬರಹ ಸಂ/ಕಂ/ಪಹಣಿ/400/2013-14 ದಿನಾಂಕ:19.11.2014 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 29.03.2016,15.09.2016, ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ವತ್ತುಮುರುಣ್ಣಿ ಗ್ರಾಮದ ಸ.ನಂ. 43ಬಿ/1 ವಿಸ್ತೀರ್ಣ: 3.77 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು,ಸಿರುಗುಪ್ಪ ಇವರ ಹಿಂಬರಹ ಸಂ/ಕಂ/ಪಹಣಿ/400/2013-14 ರ ಹಿಂಬರಹವನ್ನು ಪ್ರಶ್ನಿಸುತ್ತಾ ಪಹಣಿ ಕಾಲಂ (9) ಹೆಸರು ನಮೂದಿಸಲು ಕೋರಿರುತ್ತಾರೆ.

ವಾದಿಗಳು ತಮ್ಮ ತಂದೆ ಹರಿಜನ ವಲ್ಲೆಪ್ಪ ಇವರು ಮರಣ ಹೊಂದಿರುವುದರಿಂದ ತಮ್ಮಗಳ ಹೆಸರಿಗೆ ಪಹಣಿ ಕಲಂ(9) ರಲ್ಲಿ ಹೆಸರುಗಳನ್ನು ನಮೂದಿಸಲು ಆದೇಶ ನೀಡಬೇಕೆಂದು ಕೋರಿರುತ್ತಾರೆ.ವಾದಿಗಳು ಸಲ್ಲಿಸಿದ ಮೇಲ್ಮನವಿಯಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ 1966ರ ಪೈಸಲ್ ಪತ್ರಿಕೆಯಲ್ಲಿ ಮಾದಿಗವಲ್ಯ ಯಿರಗ ಎಂದು ದಾಖಲಾಗಿದ್ದು, ಹಳೇ ಕೈಬರಹ ಪಹಣಿಯಲ್ಲಿ ಕಲಂ (9) ರಲ್ಲಿ ಖಾಲಿ ಇರುವುದು ಕಂಡುಬರುತ್ತದೆ. ಕಂದಾಯ ನಿರೀಕ್ಷಕರು ಹಚೊಳ್ಳಿ ಇವರು ದಿನಾಂಕ:05.05.2014 ರ ವರದಿಯಲ್ಲಿ ಮಾದಿಗವಲ್ಯ ಮಗನಾದ ಹರಿಜನ ಶಿವಣ್ಣ ಇವರು ಇಲ್ಲಿಯವರೆಗೆ ಸಾಗು ಮಾಡುತ್ತಿದ್ದಾರೆಂದು ಗಣಕೀಕರಣ ಪಹಣಿಯಲ್ಲಿ ಮಾದಿಗರವಲ್ಯ ಇವರ ಹೆಸರನ್ನು ನಮೂದಿಸಬಹುದೆಂದು ವರದಿ ಸಲ್ಲಿಸಿರುತ್ತಾರೆ.ಹಾಗೂ ಸದರಿ ಪಹಣಿ ಕಲಂ (9) ರಲ್ಲಿ ಹೆಸರನ್ನು ಸೇರಿಸಲು ಕೋರಿರುವ ಮನವಿಗೆ ಮೇಲ್ಮನವಿ ಸಲ್ಲಿಸಿಕೊಳ್ಳಲು ತಿಳಿಸಿರುತ್ತಾರೆ.ಪ್ರಕರಣಕ್ಕೆ ಸಂಬಂದಿಸಿದಂತೆ ಮೂಲ ದಾಖಲೆಗಳನ್ನು ಪರಿಶೀಲಿಸಿ,ಅಗತ್ಯ ತಿದ್ದುಪಡಿ ಪ್ರಸ್ತಾವನೆಯನ್ನು ಈ ಆದೇಶ ತಲುಪಿದ 15 ದಿನದೊಳಗೆ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸಲು ಈ ಕೆಳಕಂಡ ಆದೇಶ

:: ಆದೇಶ ::

ವಾದಿಯ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ,

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ವತ್ತುಮುರಣಿ ಗ್ರಾಮದ ಸ.ನಂ.43ಬಿ/1 ವಿಸ್ತೀರ್ಣ 3.77, ಎಕರೆ ಜಮೀನಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯ ತಿದ್ದುಪಡಿ ಪ್ರಸ್ತಾವನೆಯನ್ನು ಈ ಆದೇಶ ತಲುಪಿದ 15 ದಿನದೊಳಗೆ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿದೆ.

ಈ ಆದೇಶವನ್ನು ಹೇಳಿ,ಬರೆಯಿಸಿ ತಪ್ಪುಗಳನ್ನು ತಿದ್ದಿ ದಿನಾಂಕ:15.09.2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ